**2ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ.**

ಸಿ.ಸಿ ನಂಃ 629/2012
ಸಿಡಬ್ಲೂಃ 1 ಪಿಡಬ್ಲೂಃ 1

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಅಬ್ಬಾಸ್‌ಅಲಿ ರಾಜೇಸಾಬ ದೇಸಾಯಿ |
| ವಯಸ್ಸು | ಃ- | 41 ವರ್ಷ |
| ಉದ್ಯೋಗ | ಃ- | ಕೂಲಿ |
| ಸಾಕೀನ | ಃ- | ಗೊಡಚಿನಮಲ್ಕಿ |

ದಿಃ 20-07-2018 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.
ಮುಖ್ಯ ವಿಚಾರಣೆ: ಸ.ಸ.ಅ. ರವರಿಂದ ;

ಆರೋಪಿತರನ್ನು ನೋಡಿದ್ದೇನೆ. ನಾನು, ಚಾಸಾ 7 ಹಾಗೂ ಮಕ್ಕಳು ಕೂಡಿ ನಮ್ಮ ಮನೆಯಲ್ಲಿ ಇರುತ್ತೇವೆ. 2 ನೇ ಆರೋಪಿ ನಮ್ಮ ಊರಿನವನು. ದಿಃ 02-02-2012 ರಂದು ನಾನು ರಕ್ಷಿಕ್ರಾಸದಲ್ಲಿ ಸೆಂಟ್ರಿಂಗ್ ಕೆಲಸಕ್ಕಾಗಿ ಹೋಗಿ ಸಂಜೆ 05.00 ಗಂಟೆಗೆ ಕೆಲಸ ಮುಗಿಸಿ ಮನೆಗೆ ಬಂದೆನು. ನಾನು ಮನೆಗೆ ಬರುವಷ್ಟರಲ್ಲಿ 6 ಜನರು ಮತ್ತು 1 ಕಾರು ನಮ್ಮ ಮನೆಯ ಮುಂದೆ ನಿಂತಿತ್ತು. ನಮ್ಮ ಮನೆಯ ಹಿತ್ತಲಲ್ಲಿ 6 ಜನರು ಇದ್ದರು. ಹಿತ್ತಲಿನ ಬಾಗಿಲಿನಿಂದ ಮನೆಯ ಒಳಗೆ ಬಂದರು. 6 ಜನರು ಮಂಕಿ ಟೋಪ್ಪಿಗೆ ಮುಖಕ್ಕೆ ಹಾಕಿಕೊಂಡಿದ್ದರು. ಅವರ ಬಳಿ ಗುಳಿಗೆ ಮತ್ತು ಪೌಡರ್ ಹಾಗೂ ಲಾಂಗಗಳು ಇದ್ದವು. ಅವರು ನನ್ನ ಮೇಲೆ ಹಲ್ಲೆ ಮಾಡುವಷ್ಟರಲ್ಲಿ ನಾನು ಮತ್ತು ನನ್ನ ಹೆಂಡತಿ, ಮಕ್ಕಳು ಬಾಯಿ ಮಾಡಲು ಪ್ರಾರಂಭಿಸಿದೆವು, ಬಾಯಿ ಕೇಳಿ ನಮ್ಮ ಓಣಿಯ ಜನರು ಬರಲು ಪ್ರಾರಂಭಿಸಿದರು. ಅದನ್ನು ನೋಡಿದ 6 ಜನರು ನಮ್ಮ ಮನೆಯ ಹಿತ್ತಲಿನ ಬಾಗಿಲಿಂದ ಕಾರ ಕಡೆ ಓಡಿ ಹೋಗಿ ಕಾರ ಮೂಲಕ ಹೋದರು. 3 ಜನರು ಕಾರಿನಲ್ಲಿ ಹೋಗಿದ್ದನು ನಾನು ನೋಡಿದೆ. ಒಬ್ಬ ಅಂಗವಿಕಲನಾಗಿದ್ದ ಅವನು ಎಲ್ಲಿ ಹೋದ ನನಗೆ ಗೊತ್ತಾಗಲಿಲ್ಲ. ಉಳಿದ ಇಬ್ಬರು ನಮ್ಮ ಮತ್ತು ಊರಿನ ಜನರ ಕೈಯಲ್ಲಿ ಸಿಕ್ಕರು. ಕಾರು ಕೆಂಪು ಬಣ್ಣದ್ದ ಮಾರುತಿ 800 ಆಗಿತ್ತು. ಆರೋಪಿತರ ಜೊತೆ 1 ಕೆಂಪು ಬಣ್ಣದ ಮೋಟಾರ ಸೈಕಲ ಇತ್ತು. ಅದರ ನಂ.555 ಇರಬಹುದು.

ಈ ಘಟನೆ ನಡೆಯುವ 8 ದಿನದ ಮುಂಚೆ 2 ನೇ ಆರೋಪಿತ ನಾನು ಕೆಲಸಕ್ಕೆ ಹೋಗುವ ಸಮಯದಲ್ಲಿ ಗೊಡಚಿನಮಲ್ಕಿ ಬಸ್ಸಸ್ಟಾಂಡ ಹತ್ತಿರ ಬಂದು, ನಿನ್ನ ಹತ್ತಿರ 3 ಕೆ ಜಿ ಬಂಗಾರ ಇದೆ ಅಂತಾ ನನಗೆ ಮಾಹಿತಿ ಬಂದಿದ್ದು, ಅದನ್ನು ನನಗೆ ಕೊಡು ಇಲ್ಲದಿದ್ದರೆ ಅವರು ಬರುತ್ತಾರೆ, ನಿನ್ನನ್ನು ಸೂಂದ್ (ಪ್ರಜ್ಞೆ ತಪ್ಪಿಸುವುದು) ಅಥವಾ ಕೊಲೆ ಮಾಡಿ ಬಂಗಾರವನ್ನು ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳಿದ. ಅವರು ಬರುತ್ತಾರೆ ಎಂದರೆ ಯಾರು ಬರುತ್ತಾರೆ ಅಂತಾ ನಾನು ಕೇಳಿದೆನು ಆದರೆ 2 ನೇ ಆರೋಪಿ ನನಗೆ ಹೆದರಿಸಿ ಏನನ್ನೂ ಹೇಳಲಿಲ್ಲ.

ಆ ದಿನ ನನ್ನ ಮೇಲೆ ಹಲ್ಲೆ ಮಾಡಲು ಬಂದಿದ್ದ ಆರೋಪಿತರ ಹೆಸರುಗಳು 1. ಉಮೇಶ ಕದಂ ಸಾಃ ಸಾಂಗ್ಲಿ 2. ನಾಸುರುದ್ದೀನ್ ನದಾಫ್ ಸಾಃ ಪಾಶ್ಚಾಪುರ 3. ಮುಸ್ತಾಕ್ ಅತ್ತಾರ್ ಸಾಃ ಪಾಶ್ಚಾಪುರ 4. ಜಾಫರ್ ಸಾಃ ಹುಕ್ಕೇರಿ, 5. ಮಕ್ತುಮ್ ದೇಸಾಯಿ ಸಾಃ ಗೊಡಚಿನಮಲ್ಕಿ 6. ರಮೇಶ್ ಸಾಃ ಸಾಂಗ್ಲಿ ಅಂತಾ ಇದ್ದರು. ಘಟನೆಯ ಸಮಯದಲ್ಲಿ ಚಾಸಾ 6 ಸಹಿತ ಬಂದಿದ್ದರು.

ನಾನು ಘಟನೆಯ ನಂತರ ಪ್ರಥಮ ಮಾಹಿತಿಯನ್ನು ಚಾಸಾ-13 ರವರ ಕಡೆಯಿಂದ ಬರೆಯಿಸಿ ನೀಡಿದ್ದೆನು. ಸದರಿ ಮಾಹಿತಿಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಅಂತಾ, ಸಾಕ್ಷಿಯ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ನಿಪಿ-1 ನ್ನು ನೀಡಿದ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಬಂದು ನಾವು ಹಿಡಿದ ಇಬ್ಬರು ಆರೋಪಿತರನ್ನು ಕರೆದುಕೊಂಡು ಹೋದರು. ರಾತ್ರಿ 12 ಗಂಟೆಗೆ ಪೊಲೀಸರು ಬಂದು ಹೋದ ಕಾರಣ ಮರುದಿನ ಬೆಳಿಗ್ಗೆ ನಿಪಿ-1 ನ್ನು ನೀಡಿದೆನು. ರಾತ್ರಿ ಆಗಿದ್ದ ಕಾರಣ ತಡವಾಗಿ ನಿಪಿ-1 ನ್ನು ನೀಡಿದೆನು.

ನನಗೆ ಆ ದಿನ ಹಲ್ಲೆ ಮಾಡಲು ಪ್ರಯತ್ನಿಸಿದ 6 ಜನರಲ್ಲಿ ಈ ದಿನ 3 ಜನ ಮಾತ್ರ ನ್ಯಾಯಾಲಯ ಮುಂದೆ ಇರುತ್ತಾರೆ. ಉಳಿದ 3 ಜನರನ್ನು ನೋಡಿದರೆ ಗುರುತಿಸುತ್ತೇನೆ. 3 ನೇ ಆರೋಪಿತನು ಗೈರು ಹಾಜರಿದ್ದು ಅವರ ಪರ ವಕೀಲರು ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆಗೆ ತಕರಾರು ಇಲ್ಲ ಎನ್ನುವ ಶರತ್ತಿನೊಂದಿಗೆ ಅರ್ಜಿಯನ್ನು ಪುರಸ್ಕರಿಸಲಾಯಿತು. 5 ಮತ್ತು 6 ನೇ ಆರೋಪಿತರ ಮೇಲೆ ಪ್ರಕರಣವನ್ನು ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದ್ದು ಅವರನ್ನೂ ನೋಡಿದರೂ ಗುರುತಿಸುತ್ತೇನೆ. ಆ ದಿನ ಆರೋಪಿತರು ಬಳಸಿದ ಕಾರು, ಬೈಕು, ಲಾಂಗು, ಮೊಬೈಲುಗಳನ್ನು ನೋಡಿದರೆ ಗುರುತಿಸುತ್ತೇನೆ.

ಆ ದಿನ ಆರೋಪಿತರು ಬಳಸಿದ ಕಾರು ಮತ್ತು ಬೈಕುಗಳ ಪೊಟೋಗಳನ್ನು ನೋಡುತ್ತಿದ್ದು ಪೊಟೋಗಳಲ್ಲಿ ಇರುವ ಬೈಕ ಮತ್ತು ಕಾರನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಬೈಕ್ ಮತ್ತು ಕಾರನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಿರುವ ಕಾರಣ, ಬಿಡುಗಡೆ ಪಂಚನಾಮೆ ವೇಳೆ ತೆಗೆಸಿರುವ ಬೈಕ್ ಇರುವ 4 ಪೊಟೋಗಳನ್ನು ಒಟ್ಟಿಗೆ ನಿಪಿ-2 ಅಂತಾ, ಕಾರು ಇರುವ 4 ಪೊಟೋಗಳನ್ನು ಒಟ್ಟಿಗೆ ನಿಪಿ-3 ಅಂತಾ ಗುರುತಿಸಲಾಯಿತು.

ಇತರ ಮು.ಮಾಗಳನ್ನು ಹಾಜರುಪಡಿಸದೇ ಇರುವ ಕಾರಣ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಸಹಿ/-

(ಮೋಹನ ಸದಾಶಿವ ಪೋಳ)

2ನೇ ಹೆ.ದಿ.&ನ್ಯಾ.ದಂ., ಗೋಕಾಕ.